ಪಾಟೀಲ್ ವಾಚಾಳಿಯಾಗಿದ್ದರು. ಸ್ಟುಡಿಯೊ ಒಳಗೆ ಶಿಸ್ತುಬದ್ಧವಾಗಿ ದಿನಗಟ್ಟಲೆ ಕುಳಿತು ಚಿತ್ರಬರೆದವರಲ್ಲ. ಬದಲಿಗೆ, ಕಲಾಶಾಲೆಗಳಲ್ಲಿ, ಕಲಾಕಮ್ಮಟಗಳಲ್ಲಿ ಹಾಗೂ ಕಲಾಶಿಬಿರಗಳಲ್ಲಿ ಪ್ರೇಕ್ಷಕರೊಂದಿಗಿನ ನೇರ ಒಡನಾಟದ ಸಂತೆಜೀವನದಲ್ಲೇ ಈ ಬರಿಗೈ ಸಂತನ ಆಸಕ್ತಿ ಇದ್ದದ್ದು; ಅಲ್ಲೇ ಅವರು ಸ್ಫೂರ್ತಿ ಪಡೆದುಕೊಳ್ಳುತ್ತಿದ್ದುದು. ಕಲೆಯ ಕುರಿತು, ಅದರ ಮೂಲಕದ ಲೋಕದರ್ಶನವನ್ನು ಕುರಿತು ಅವರದ್ದೇ ಆದ ಬಲವಾದ ಒಳನೋಟಗಳು ಹಾಗೂ ನಂಬಿಕೆಗಳಿದ್ದವು. ಇವರ ಬದುಕು ಹಾಗೂ ಕಲೆಯನ್ನು ಕುರಿತಾದ ಲಲಿತಕಲಾ ಅಕಾಡೆಮಿ ಪ್ರಕಟಿಸಿದ ಬಿ.ಎಸ್. ವೆಂಕಟಲಕ್ಷ್ಮಿಯವರ ಮೊನೊಗ್ರಾಫ್ ಪುಸ್ತಕ ಕರ್ನಾಟಕದ ಕಲಾವಿದರ ಬಗ್ಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗಿರುವ ಅತ್ಯಂತ ಮುದನೀಡುವ ಬರಹವಾಗಿದೆ. ಒಂದು ರೀತಿಯಲ್ಲಿ 'ಅನುಕೂಲಸತಿ' ಪರಿಕಲ್ಪನೆಯ ಕಲಾವಿದ ಪಾಟೀಲರು. ಅಂದರೆ, ಸರ್ಕಾರೀ ಸಂಸ್ಥೆಯ ಕಲಾವಿದರಾಗಿದ್ದಾಗ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಇವರು ಸೃಷ್ಟಿಸಿದ ಟ್ಯಾಬ್ಲೋಗಳು ಐದಾರು ಬಾರಿ ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿವೆ. ಇದರಲ್ಲಿ ಪಾಟೀಲರ ನಿರ್ದಿಷ್ಟ ಕಲಾತ್ಮಕ ಕೊಡುಗೆಯು ಅಮಾನ್ಯವಾಗಿರಲು ಕಾರಣ ಅದೊಂದು ಸೃಜನಶೀಲತೆಯ ಸ್ವೀಕೃತಿಯ ಸೀಮಿತ ಚೌಕಟ್ಟಿನಾಚೆಗಿರುವುದಾಗಿದೆ. ಸ್ವತಃ ಪಾಟೀಲರಿಗೇ ಇಂತಹ ತಮ್ಮ ಪ್ರಾಯೋಜಿತ ಕೃತಿರಚನೆಯಲ್ಲಿ ಅಡಗಿರುವ ಕಲಾತ್ಮಕತೆಯಲ್ಲಿ ನಂಬಿಕೆ ಇರದುದ್ದರಿಂದಲೋ ಏನೋ ಅವುಗಳ ದಾಖಲೆಗಳೇ ಇಂದು ನಮಗೆ ಅಲಭ್ಯ. ಸ್ವತಃ ಕಲಾವಿದರ ನಂಬಿಕೆ ಮೀರಿದ ಅವರದ್ದೇ ಸೃಷ್ಟಿಯಲ್ಲಿನ ಕಲಾತ್ಮಕ ಸಾಧನೆಗಳು ನಶಿಸುವುದು ಹೀಗೆ.

★★★

ಪಾಟೀಲರ ವ್ಯವಹಾರ ಜ್ಞಾನದ ಮುಗ್ಧತೆಯಿಂದಾಗಿ ಅವರನ್ನು ಬಳಸಿಕೊಂಡವರು ಬಹಳ ಮಂದಿ. ತಮ್ಮನ್ನು ಅಣಕಿಸುವವರ ನಡುವೆಯೇ ಇದ್ದು ಬೆಳೆದವರು. 'ಕೃತಿಗಳ ಮೂಲಕ ಮಾತ್ರ ನಾವು ಗುರುತಿಸುವಂತಾಗಬೇಕು' ಎಂದು ಬಲವಾಗಿ ನಂಬಿದ್ದವರು. ಕಲೆಗಾಗಿ ಕಲೆ ಎಂಬ ಸುದೀರ್ಘ ನಂಬಿಕೆಯನ್ನು ನೆಚ್ಚಿಕೊಂಡು ಬದುಕಿದ್ದರು, ಬದುಕಿದ್ದಷ್ಟು ದಿನ ಆ ಮಟ್ಟಿಗೆ ಸಾರ್ಥಕ್ಯವನ್ನೂ ಅನುಭವಿಸಿದರು. ಸಮಕಾಲೀನ ಕರ್ನಾಟಕದ ಕಲೆಯ ಬಗ್ಗೆ ಒಂದು ಕುತೂಹಲವನ್ನೂ ಉಳಿಸಿಕೊಂಡಿದ್ದರು. ಆದ್ದರಿಂದ ಪಾಟೀಲರು ಜೀವಂತವಾಗಿರುವವರೆಗೂ ತಮ್ಮದೇ ಮಾನದಂಡದ ಪ್ರಕಾರ ಬದುಕಿ, ತಮ್ಮ ಸಾರ್ಥಕ್ಯವನ್ನು ತಮ್ಮ ಇತಿಮಿತಿ, ಸಾಧ್ಯತೆಗಳಿಂದಲೇ ತೂಗಿ ನೋಡಿದವರು. ಕಲೆಯ ಪರಿಕಲ್ಪನೆಯನ್ನು ಅವರದ್ದೇ ಮಾನದಂಡದ ಆಚೆ ಸ್ವೀಕರಿಸಲು ಒಪ್ಪದೇ ಹೋದವರು. ಕೃತಿಗಿಂತಲೂ, ವ್ಯಕ್ತಿತ್ವಕ್ಕಾಗಿ ಹಾಗೂ ತಮ್ಮ ಕ್ರಿಯಾ ನಡವಳಿಕೆಗಾಗಿ ಕಲಾಲೋಕಕ್ಕೆ ಮುದ ನೀಡಿದವರು.

---


## ಎಚ್.ಎ. ಅನಿಲ್‌ಕುಮಾರ್

ಬೆಂಗಳೂರಿನ ಅನಿಲ್‌ಕುಮಾರ್ ಭಾರತೀಯ ದೃಶ್ಯಕಲೆ, ಕನ್ನಡ ಸಿನಿಮಾ ಹಾಗೂ ಸಾಹಿತ್ಯದಲ್ಲಿ ಕೆಲಸ ಮಾಡುತ್ತಿರುವ ಕ್ರಿಯಾಶೀಲ. ಎರಡೂವರೆ ದಶಕಗಳಿಂದ ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಬರೆಯುತ್ತಿದ್ದಾರೆ. ಶಾಂತಿನಿಕೇತನ, ರಾಯಲ್ ಕಾಲೇಜ್ ಆಫ್ ಆರ್ಟ್ಸ್‌ಗಳಲ್ಲಿ ವಿಮರ್ಶೆ ಹಾಗೂ ಕ್ಯುರೇಷನ್ ವಿಷಯಗಳ ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಚಿತ್ರಕಲಾ ಪರಿಷತ್ತಿನ ಮಹಾವಿದ್ಯಾಲಯದಲ್ಲಿ ಕಲಾಇತಿಹಾಸ ಬೋಧಕರು.